ಈ ಪ್ರಮುಖ ಕಾಮಗಾರಿಗಳನ್ನು ಮೆ : ಎಲ್ ಅಂಡ್ ಟಿ, ಬೆಂಗಳೂರು ಇವರಿಗೆ ನೇಮಿಸಲಾಗಿದ್ದು, ಕಾಮಗಾರಿಗಳು ಮುಗಿಯುವ ಹಂತದಲ್ಲಿದೆ.

ಈ ಯೋಜನೆಯಡಿ, ಈಗಾಗಲೇ 25 ಕಿ.ಮೀ. ಉದ್ದದ ಎಂ.ಎಸ್. ಕೊಳವೆಯನ್ನು ಸವದತ್ತಿ ಮತ್ತು ಅಮ್ಮಿನಭಾವಿ ಮಾರ್ಗದಲ್ಲಿ ಅಳವಡಿಸಿ ಸೋರುವಿಕೆಯನ್ನು ತಡೆಗಟ್ಟಿ ಹಾಲಿ ಈ ಅವಳಿ ನಗರಗಳಿಗೆ ಸುಮಾರು 55 ದಶಲಕ್ಷ ಲೀಟರ್‌ಗಳಷ್ಟು ನೀರನ್ನು ಸರಬರಾಜು ಮಾಡಲಾಗುತ್ತಿದೆ. ಹಾಗೂ 5 ಮೇಲ್ಮಟ್ಟದ ಜಲಸಂಗ್ರಾಹಾಗಾರಗಳನ್ನು ನಿರ್ಮಿಸಲಾಗಿದೆ. ಹಾಗೂ ಸೌಂವತ್ತಿಯಲ್ಲಿ 1900 ಹೆಚ್.ಪಿ. ಪಂಪ್‌ಸೆಟ್‌ಗಳನ್ನು ಅಳವಡಿಸಲು ಟೆಂಡರ್ ಕರೆಯಲಾಗಿದೆ. ಇದಲ್ಲದೆ, ಹುಬ್ಬಳ್ಳಿ-ಧಾರವಾಡ ತುರ್ತು ಅಭಿವೃದ್ಧಿ ನೀರು ಸರಬರಾಜು ಯೋಜನೆಯ ಪರಿಷ್ಕೃತ ಅಂದಾಜನ್ನು ರೂ. 6384.00 ಲಕ್ಷಗಳಿಗೆ ತಯಾರಿಸಲಾಗಿದ್ದು ಸದರಿ ಪರಿಷ್ಕೃತ ಅಂದಾಜಿನಲ್ಲಿ ಈ ಕೆಳಕಂಡ ಹೆಚ್ಚುವರಿ ಕಾಮಗಾರಿಗಳನ್ನು ಪ್ರಸ್ತಾಪಿಸಲಾಗಿದೆ.

ಅ) ಮಲಪ್ರಭಾ ಅಣೆಕಟ್ಟು ಹಿನ್ನೀರಿನಲ್ಲಿ (ಬ್ಯಾಕ್ ವಾಟರ್ ಹೊಸ ಜ್ಯಾಕ್‌ವೆಲ್ ಕಮ್ ಪಂಪ್‌ಹೌಸ್‌ನ್ನು ಸೌಂದತ್ತಿಯಲ್ಲಿ ನಿರ್ಮಿಸುವುದು.

ಆ) 73.80 ದಶಲಕ್ಷ ಲೀಟರ್ ಸಾಮರ್ಥ್ಯದ ಜಲಶುದ್ದೀಕರಣ ಘಟಕವನ್ನು ಅಮ್ಮಿನಭಾವಿಯಲ್ಲಿ ನಿರ್ಮಿಸುವುದು.

ಇ) ಸೌದಂತ್ತಿಯಲ್ಲಿ 1900 ಅಶ್ವಶಕ್ತಿ ಡೀಪ್‌ವೆಲ್ ಟರ್ಬೈನ್ ಪಂಪ್ ಸೆಟ್‌ಗಳನ್ನು (2 ಸಂಖ್ಯೆಯಲ್ಲಿ) ಹೊಸ ಜಾಕ್‌ವೆಲ್‌ನಲ್ಲಿ ಅಳವಡಿಸುವುದು.

ಮೇಲ್ಕಂಡ ಕಾಮಗಾರಿಗಳಲ್ಲಿ, ಜ್ಯಾವೆಲ್ ಕಮ್ ಪಂಪ್‌ಹೌಸ್ ನಿರ್ಮಿಸುವ ಬಗ್ಗೆ ಮೆ : ಎಲ್ ಅಂಡ್ ಟಿ, ಬೆಂಗಳೂರು ಇವರಿಗೆ ವಹಿಸಿ ಕೊಡಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. (ಆ) ಮತ್ತು (ಇ) ಕಾಮಗಾರಿಗಳಿಗೆ ಟೆಂಡರ್ ಕರೆದು ಕೈ ಗೊಳ್ಳುವ ಹಂತದಲ್ಲಿದೆ.

3. ಕರ್ನಾಟಕ ಜಲ ಮಂಡಲಿಯಿಂದ ಕಳೆದ 6 ತಿಂಗಳಿನಲ್ಲಿ ಸದರಿ ಕಾಮಗಾರಿಗಳಿಗೆ ರೂ. 319.36 ಲಕ್ಷಗಳು ಖರ್ಚು ಮಾಡಿದ್ದು ಈವರೆಗೆ ಒಟ್ಟು ರೂ. 3131.00 ಲಕ್ಷಗಳು ಈ ಯೋಜನೆಗೆ ಖರ್ಚು ಮಾಡಲಾಗಿದೆ.

## ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಪೀಠ

136 (317) - ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉತ್ತರ ಕರ್ನಾಟಕ ಜನತೆಯ ಬಹುದಿನಗಳ ಬೇಡಿಕೆಯಾದ ಹೈಕೋರ್ಟ್ ಪೀಠ ಹುಬ್ಬಳ್ಳಿ ನಗರದಲ್ಲಿ ಪ್ರಾರಂಭಿಸಲಿಕ್ಕೆ ಕೈಗೊಂಡ ಕ್ರಮವೇನು;

ಆ) ಹೈಕೋರ್ಟ್ ಪೀಠ ಹುಬ್ಬಳ್ಳಿ ನಗರದಲ್ಲಿ ಸ್ಥಾಪಿಸಿದರೆ ಉತ್ತರ ಕರ್ನಾಟಕಕ್ಕೆ ಆದ "ಅನ್ಯಾಯದ ಕೂಗು" ಎಂಬ ನೋವು ಜನತೆ ಮರೆಯುವುದಿಲ್ಲವೇ;

ಇ) ಹೈಕೋರ್ಟ್ ಪೀಠ ಸ್ಥಾಪನೆಯಲ್ಲಿ ಉಂಟಾಗಿರುವ ತೊಂದರೆಗಳಾವುವು; ವಿವರ ನೀಡುವುದು?

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :

ಅ) ರಾಜ್ಯದ ಉತ್ತರ ಕರ್ನಾಟಕ ಭಾಗದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಪೀಠ ಸ್ಥಾಪನೆ ಕುರಿತು ಗೌರವಾನ್ವಿತ ನ್ಯಾಯಮೂರ್ತಿ ಶ್ರೀ ಜಿ.ಸಿ. ಭರೂಕರವರ ಅಧ್ಯಕ್ಷತೆಯಲ್ಲಿ ರೂಪುಗೊಂಡಿರುವ ಎಳ್ಳರು ನ್ಯಾಯಮೂರ್ತಿಗಳ ಸಮಿತಿಯು ಈಗಾಗಲೇ ಗುಲ್ಬರ್ಗಾ, ಹುಬ್ಬಳ್ಳಿ-ಧಾರವಾಡಗಳಿಗೆ ಭೇಟಿ ನೀಡಿ ಅಭಿಪ್ರಾಯ ಸಂಗ್ರಹಿಸಿದ್ದು; ಪರಿಶೀಲನೆ ನಡೆಸಿದ್ದು, ಸಮಿತಿಯ ಶಿಫಾರಸ್ಸುಗಳ ಆಧಾರದ ಮೇಲೆ ಉಚ್ಚ ನ್ಯಾಯಾಲಯ ಕಳುಹಿಸುವ ಪ್ರಸ್ತಾವನೆಯನ್ನು ನಿರೀಕ್ಷಿಸಲಾಗುತ್ತಿದೆ.

ಆ)ಇ) ಮೇಲಿನ ಹಿನ್ನೆಲೆಯಲ್ಲಿ ಈ ಪ್ರಶ್ನೆಗಳು ಉದ್ಭವಿಸುವುದಿಲ್ಲ.

## ರಾಜ್ಯದ ಅಬಕಾರಿ ಇಲಾಖೆಯ ಆದಾಯ

137(319) - ಶ್ರೀ ಹೊನ್ನಾಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಅಬಕಾರಿ ಇಲಾಖೆಯಿಂದ ಕಳೆದ 3 ವರ್ಷಗಳಲ್ಲಿ ಬಂದ ಆದಾಯವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ಸದರಿ ಇಲಾಖೆಯಿಂದ ಬಂದ ಆದಾಯವನ್ನು ಯಾವ ಯಾವ ಕೆಲಸಕ್ಕೆ ಖರ್ಚು ಮಾಡಲಾಗಿದೆ; ವಿವರ ನೀಡುವುದು.

ಇ) ಅಬಕಾರಿ ಹರಾಜು ಮಾಡುವಲ್ಲಿ ವಿಳಂಬವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಅಬಕಾರಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ ಹಣವೆಷ್ಟು? ಅಂತಹ ಗುತ್ತಿಗೆದಾರರ ಪೂರ್ಣ ವಿವರ ನೀಡುವುದು?

ಶ್ರೀ ಎಂ.ಎಂ. ನಾಣಯ್ಯ (ಅಬಕಾರಿ ರಾಜ್ಯ ಸಚಿವರು) :

ಅ) ವಿವರಗಳು ಕೆಳಕಂಡಂತಿದೆ.

| ವರ್ಷ | (ಕೋಟಿ ರೂ. ಗಳಲ್ಲಿ) |
|---|---|
| 1999-2000 | 1233.55 |
| 2000-2001 | 1550.23 |
| 2001-2002 | 2004.11 |

(ಜಿಲ್ಲಾವರು ವಿವರಗಳನ್ನು ಅನುಬಂಧ 'ಎ' ನಲ್ಲಿ ನೀಡಿದೆ)

ಆ) ರಾಜ್ಯದ ಒಟ್ಟಾರೆ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಿಸಲಾಗಿದೆ.

ಇ) ಇಲ್ಲ

ಈ) ದಿನಾಂಕ 31.3.2002 ರಂದು ಇದ್ದಂತೆ:- ಅಸಲು ರೂ. 184.55 ಕೋಟಿಗಳು ಬಡ್ಡಿ ರೂ. 305.79 ಕೋಟಿಗಳು ವಿವರಗಳನ್ನು ಅನುಬಂಧ 'ಬ' ನಲ್ಲಿ ನೀಡಲಾಗಿದೆ.